**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .211/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಡಿ ನಾಗರಾಜು | **ಚಾ.ಸಾ.-3** |
| **ತಂದೆಯ ಹೆಸರು** | - | ಬಸವಯ್ಯ | **ಫ್ರಾ.ಸಾ.-8** |
| **ವಯಸ್ಸು** | - | 60 ವರ್ಷ | |
| **ಉದ್ಯೋಗ** | - | ವ್ಯವಸಾಯ | |
| **ವಾಸಸ್ಥಳ** | - | ಉಪ್ಪಿನಕೆರೆ ಗ್ರಾಮ | |

ದಿನಾಂಕಃ 22-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 1, 2, 4 ಮತ್ತು ಮೃತ ವಿಕಾಶ್ ರವರ ಪರಿಚಯವಿರುವುದಿಲ್ಲ. ನ್ಯಾಯಾಲಯದ ಮುಂದೆಯಿರುವ ಆರೋಪಿಯ ಪರಿಚಯವಿರುವುದಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ಗಾಯಾಳುವನ್ನು ಉಪಚರಿಸಿಲ್ಲ. ಗಾಯಾಳುಗಳಿಗೆ ಯಾವುದೇ ಚಿಕಿತ್ಸೆ ಕೊಡಿಸಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿಃ 28-05-2016 ರಂದು ಸಂಜೆ 07-30 ಗಂಟೆ ಸಮಯದಲ್ಲಿ ನೀವು ಮತ್ತು ಚಾಸಾ-4 ರವರು ಮತ್ತು ಚಾಸಾ-1 ರವರು ನಿಮ್ಮ ಊರಿನ ಗೇಟ್ ಹತ್ತಿರ ಕುಳಿತಿದ್ದಾಗ ಚಾಸಾ-2 ರವರು ತನ್ನ ಬಾಬ್ತು ಸೈಕಲ್ ನಲ್ಲಿ ವಿಕಾಶ್ ಎಂಬುವವರನ್ನು ಕೂರಿಸಿಕೊಂಡು ಉಪ್ಪಿನಕೆರೆ ಹಾಲಿನ ಡೈರಿಗೆ ಹಾಲನ್ನು ತೆಗೆದುಕೊಂಡು ರಸ್ತೆಯ ಎಡಭಾಗದ ಹಂಚಿನಲ್ಲಿ ಸುಶೀಲಮ್ಮರವರ ಫಾರಂ ಹೌಸ್ ನೇರದಲ್ಲಿ ಹೋಗುತ್ತಿದ್ದಾಗ ಅದೇ ಸಮಯಕ್ಕೆ ಮದ್ದೂರು

ಕಡೆಯಿಂದ ಓರ್ವ ಕಾರಿನ ಚಾಲಕ ತನ್ನ ಬಾಬ್ತು ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಚಾಸಾ-2 ಮತ್ತು ವಿಕಾಶ್ ರವರು ಹೋಗುತ್ತಿದ್ದ ಸೈಕಲ್ ಗೆ ಹಿಂಬದಿಯಿಂದ ಡಿಕ್ಕಿಪಡಿಸಿ ಅಪಘಾತಪಡಿಸಿದನು ಎಂದರೆ ಸರಿಯಲ್ಲ. ಆಗ ಚಾಸಾ-2 ಮತ್ತು ವಿಕಾಶ್ ಡಿಕ್ಕಿಯ ರಭಸಕ್ಕೆ ಕಾರಿನ ಮೇಲೆ ಬಿದ್ದು ನಂತರ ರಸ್ತೆಯ ಮೇಲೆ ಬಿದ್ದು ಹೋಗಿರುತ್ತಾರೆ ಎಂದರೆ ಸರಿಯಲ್ಲ. ತಕ್ಷಣ ಅಲ್ಲಿಯೇ ಇದ್ದ ನೀವು ಚಾಸಾ-1 ಮತ್ತು 4 ರವರು ಘಟನಾ ಸ್ಥಳಕ್ಕೆ ಹೋಗಿ ಗಾಯಾಳುಗಳನ್ನು ಉಪಚರಿಸಿ ನೋಡಿದಾಗ ಶಿವಶಂಕರ್ ಎಂಬುವವರಿಗೆ ಹಣೆ, ಎಡತೋಳಿನ ಬಳಿ ಪೆಟ್ಟಾಗಿ ರಕ್ತಗಾಯುಂಟಾಗಿತ್ತು ಎಂದರೆ ಸರಿಯಲ್ಲ. ವಿಕಾಶ್ ಎಂಬುವವರಿಗೆ ತಲೆಗೆ, ಹಣೆ ಮತ್ತು ಎದೆಯ ಬಳಿ ತೀವ್ರತರದ ಪೆಟ್ಟಾಗಿ ರಕ್ತ ಬರುತ್ತಿತ್ತು ಎಂದರೆ ಸರಿಯಲ್ಲ. ಅಪಘಾತಪಡಿಸಿದ ಕಾರಿನ ಚಾಲಕ ತನ್ನ ಕಾರನ್ನು ನಿಲ್ಲಿಸದೇ ಗಾಯಾಳುಗಳನ್ನು ಉಪಚರಿಸದೇ ಅಲ್ಲಿಂದ ಹೊರಟು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಕಾರಿನ ನಂಬರ್ ಪ್ಲೇಟ್ ಅಲ್ಲಿಯೇ ರಸ್ತೆಯ ಪಕ್ಕದಲ್ಲಿ ಬಿದಿದ್ದು ಅದರ ನಂಬರ್ ಕೆಎ-11 ಎಂ 5930 ಆಗಿತ್ತು ಎಂದರೆ ಸರಿಯಲ್ಲ. ನೀವು, ಚಾಸಾ-1 ಮತ್ತು 4 ರವರು ಅಲ್ಲಿಯೇ ದಾರಿಯಲ್ಲಿ ಬರುತ್ತಿದ್ದ ಒಂದು ಆಟೋದಲ್ಲಿ ಮದ್ದೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಗಾಯಾಳುಗಳ ಕುಟುಂಬಸ್ಥರು ಅಪಘಾತದ ವಿಚಾರ ತಿಳಿದು ಆಸ್ಪತ್ರೆಗೆ ಬಂದಿದ್ದು ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮತ್ತು ನಿಮಾನ್ಸ ಹೋಗಿದ್ದು, ಚಿಕಿತ್ಸೆ ಫಲಕಾರಿಯಾಗಿದೆ ದಿಃ29-05-2016 ಬೆಳಿಗ್ಗೆ 07-30 ಗಂಟೆಯಲ್ಲಿ ವಿಕಾಶ್ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವನ್ನು ನಿಮಗೆ ತಿಳಿಸಿ ಮದ್ದೂರು ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ತನಿಖಾಧಿಕಾರಿ ಆರೋಪಿಯನ್ನು ವಶಕ್ಕೆ ಪಡೆದಿದ್ದು ಆತನನ್ನು ನೀವು ಪೊಲೀಸ್ ಠಾಣೆಯಲ್ಲಿ ನೋಡಿ ಗುರುತಿಸಿರುತ್ತೀರೀ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದೆಯಿರುವ ಆರೋಪಿಯೇ ಆ ದಿನ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಚಾಸಾ-2 ಮತ್ತು ವಿಕಾಶ್ ರವರಿಗೆ ಅಪಘಾತಪಡಿಸಿ ಗಾಯಾಳು ವಿಕಾಶ್ ರವರ ಮರಣಕ್ಕೆ ಕಾರಣರಾಗಿರುತ್ತಾರೆಂದರೆ ಸರಿಯಲ್ಲ. ದಿಃ 03-06-2016 ರಂದು ಆರೋಪಿಯನ್ನು ಗುರುತಿಸಿದ ಬಗ್ಗೆ ತನಿಖಾಧಿಕಾರಿ ಮುಂದೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿಯು ಒಪ್ಪದ ಕಾರಣ, ಹೇಳಿಕೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ನಿಪಿ-20 ರಲ್ಲಿರುವ ವಿಚಾರಗಳು ನಿಮಗೆ

ಎಲ್ಲಾ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಏನೂ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.